ಮಹಾದೇವ ಹಡಪದ

# ಸಪ್ತಪದಿ

ಸುಧಾರಿಸಲು ಅವನೊಳಗೆ ಯಾವ ಕುಂದುಕೊರತೆಗಳು ಇಲ್ಲವೆಂದಾದರೂ ಆಕೆಯಲ್ಲಿನ ಅನುರಾಗದ ಪ್ರೀತಿಯ ಒರತೆಯಲ್ಲಿ ಯಾವ ಸುಮನೋಹರ ಭಾವಾವೇಶವೂ ಜಿನುಗಿರಲಿಲ್ಲ. ತೋರಿಕೆಯ ಕರ್ಮಕಟ್ಟಿಕೊಂಡು ಕುಣಿಯುವ ಅವಳ ಅಪ್ಪನ ಮುಖದಲ್ಲಿ ಅದೆಂತಹ ಗಾಂಭೀರ್ಯವೋ, ಅದೇನು ಸುಡುಗಾಡೋ... ಹೆಣ್ಣು ಹೆತ್ತ, ಸೋತ, ಸಂಕಟದ ದೈನೇಸಿತನ ನೋಡಿದಾಗೆಲ್ಲ ಕೆಂಡವಾಗುತ್ತಿದ್ದಳು. ಬರುವ ಗಂಡಿಗಾಗಿ ವಾರದ ಹಿಂದೆಯೇ ಖರೀದಿಸಿ ತಂದಿದ್ದ ಮೈಸೂರು ಪಾಕಿಗೆ ಇರುವೆ ಮುತ್ತಿಕೊಂಡು ಈಟೀಟೆ ತುಂಡರಸಿ ಹೊತ್ತೊಕೊಂಡು ಸಾಲಾಗಿ ಲಗ್ನದ ಮನೆಗೆ ಹೊಂಟಂತೆ ನಡೆದಿದ್ದವು. ಅದು ನಡೆದ ದಾರಿಯಲ್ಲ, ಹೆದ್ದಾರಿ. ನಡಿಗೆಯ ಶಿಸ್ತಿಗೆ ತಾನು ಗೋಣು ಬಗ್ಗಿಸಿ ನಡೆದವಳಂತೆ, ಅಲ್ಲೆಲ್ಲೋ ಗೋಡೆಯ ತುತ್ತತುದಿ ಏರಿ ಇನ್ನೊಂದು ಮಗ್ಗುಲಲ್ಲಿ ಇಳಿದು, ಮತ್ತೆಲ್ಲೋ ಕಾಣದ ನೆಲದಾಳದ ಠಾವಿನಲ್ಲಿ ಸಿಕ್ಕಿಕೊಂಡು, ಅದೇ ಇಂದ್ರಾದಿ ಚಂದ್ರನ ಸುಖದ ಅರಮನೆ ಎಂದು ಭಾವಿಸುತ, ಆ ನೆಲದ ಕಾವಿನಲಿ ಬೇಗುದಿಯ ಸುಖವನ್ನು ಅರಸುತ್ತಿರುವ ಹಾಗೆ... ಕನಸುಗಳನ್ನು ಹೊಸೆಯುತ್ತಿದ್ದಳು.

ತುಸು ಎತ್ತರವೇ ಎನ್ನಿಸುವ ಕೊಂಚ ಸ್ಫುರದ್ರೂಪಿಯೂ, ಸುಳುವು ಬರೆದಂತೆ ಬಾಚಿಕೊಂಡ ಕೂದಲು ಗಾಳಿಗೆ ಗರಿಗೆದರಿ ಹಾರುತ್ತಿದ್ದು, ನೀಳನಾಸಿಕ, ಹೊಳಪಿನ ಹಾಲುಗೆನ್ನೆ, ಹರವಾದ ಎದೆ, ತಲೆಯಿಟ್ಟು ಮಲಗಿದರೆ ಅವನ ಅಂತರಂಗದ ಕೀಲಿ ತೆಗೆದು ಆ ಗೂಡಿನೊಳಗಿನ ಲಯವನ್ನು ತನ್ನದಾಗಿಸಿಕೊಳ್ಳುವ ಹುಚ್ಚುಸಂಭ್ರಮ. ಮಂದನಗೆ ಮೂಡಿದಾಗ ತನ್ನ ಸಿನಿಮೀಯ ಕಲ್ಪನೆಗೆ ಸಾದಗಪ್ಪು ಮೈಬಣ್ಣದ ಚೆಲುವು ಸಾಕಾಗುವುದಿಲ್ಲವೆನಿಸಿತು. ಹಾಗೆ ಕಣ್ಣಂಚಿನಲ್ಲಿ ಸುಳಿದ ಆ ಕನಸಿಗೆ ಗರಿಮೂಡಿ ರೆಕ್ಕೆ ಬಿಚ್ಚಿ ಹಾರುವುದಾದರೆ ಬಹುಶಃ ಆಕೆಗೆ ಮದುವೆಯ ಯಾವ ಒಲವೂ ಇದ್ದಿರಲಿಲ್ಲ. ಹೀಗೆ ಸುಮ್ಮನೆ ಗೆಳೆಯರಂತೆ... ಉಸುಕಿನಲ್ಲಿ ಮನೆ ಕಟ್ಟಿ ಆಡುವ ಆಟದ ಹಾಗಿನ ಬದುಕು... ಏನಿಲ್ಲವೆಂದರೂ ಮನೆಯ ಮೇಲೊಂದು ಬೆಳಕಿಂಡಿಗೆ ಸಾಕಾಗುವಷ್ಟು ಬೆರಳು ತೂರಿಸಿ ಬೆಳಕು ಮಾಡಿಕೊಳ್ಳುವ, ಆ ಮರಳಿನ ದಿನ್ನೆಗೆ ಹೋಗಲು ಒಂದು ರಸ್ತೆ, ದಾರಿಗಂಟಿಕೊಂಡಂತೆ ಕಂಪೌಂಡ್, ಅಲ್ಲೊಂದು ಬಾವಿ, ತನ್ನಿಷ್ಟದ ಜಾಜಿ, ದಾಸಾಳ, ಗುಲಾಬಿ ಗಿಡಗಳ ಜೊತೆಗೆ ಅಗತ್ಯಕ್ಕಾಗುವಷ್ಟು ಕಾಯಿಪಲ್ಯೆ... ನಾಲ್ಕು ತೆಂಗಿನಮರ, ಪೇರಲ, ಮಾವು, ಬಾಳೆ ಹಣ್ಣುಗಳನ್ನು ತಿನ್ನಲು ಬರುವ ಬೆಳುವ, ಗುಬ್ಬಿ, ಗಿಳಿ,